OS No.187/2018 DW.1

ಅಸಲು ದಾವೆ ಸಂಖ್ಯೆ - 187/2018
ಡಿ.ಡಬ್ಲ್ಯೂ - 01
ದಿನಾಂಕಃ 06-03-2026
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ವಾದಿಯರ ಪರ ಶ್ರೀ. ಯು ಟಿ ಬಿ ವಕೀಲರಿಂದ**

ನಾನು ಬಿ ಎಸ್ ೯ ಪಾರ್ಮರ ಪದವಿಧರ. ನೀವು ಎನು ಕೆಲಸ ಮಾಡುತ್ತೀರಿ ಎಂದರೆ ನನ್ನ ತಂದೆಗೆ ಆರೋಗ್ಯ ಸರಿಯಾಗಿ ಇಲ್ಲದೇ ಇರುವುದರಿಂದ ಜಮೀನನ್ನು ಮತ್ತು ಅವರ ಅಂಗಡಿಯನ್ನು ನೋಡಿ ಕೊಳ್ಳುತ್ತೇನೆ. ನಿಮ್ಮ ತಂದೆಗೆ ಎಷ್ಟು ಜನ ಮಕ್ಕಳು ಎಂದರೆ ನಾನು ಗಂಡು ಮಗ, ಹೆಣ್ಣು ಮಕ್ಕಳು 3 ಜನ. ನಿಮ್ಮ ತಂದೆಯವರ ಮೂಲ ಊರು ಯಾವುದು ಎಂದರೆ ಚಂದಾಪುರ ಶಿಗ್ಗಾಂವ ತಾಲೂಕು. ನಿಮ್ಮ ತಂದೆಯವರ ಜಮೀನು ಎಷ್ಟು ಇದೆ ಎಂದರೆ ಸದ್ಯಕ್ಕೆ ನಾನು 2 ಎಕರೆ ಜಮೀನನ್ನು ನೋಡಿಕೊಳ್ಳುತ್ತಿದ್ದೇನೆ. 3 ಎಕರೆ 3 ಗುಂಟೆ ಇದೆ. ಅಂಗಡಿ ಎಂದರೆ ಯಾವುದು ಎಂದರೆ ಕಿರಾಣಿ ಅಂಗಡಿ. ಅಂಗಡಿ ಯಾವ ಊರಿನಲ್ಲಿ ಇದೆ ಎಂದರೆ ಅಲ್ಲಿಪೂರದಲ್ಲಿ ಇದೆ. ನೀವು ಯಾದ ಆಧಾರದ ಮೇಲೆ ಇಲ್ಲಿ ಸಾಕ್ಷಿಯು ನುಡಿಯಲು ಬಂದಿದ್ದೀರಿ ಎಂದರೆ ನಮ್ಮ ತಂದೆಗೆ ಹುಷಾರು ಇಲ್ಲದೇ ಇರುವುದರಿಂದ ಅವರ ಆದೇಶದ ಮೇರೆಗೆ ನಾನು ಬಂದಿರುತ್ತೇನೆ. ನಿಮ್ಮ ತಂದೆಯವರಿಗೆ ಓದಲು ಬರೆಯಲು ಬರುತ್ತದೆ ಎಂದರೆ ಸರಿ.

ನಿಮ್ಮ ತಂದೆಯವರು ಈ ಪ್ರಕರಣದಲ್ಲಿ ಪ್ರತಿವಾದ ಪತ್ರವನ್ನು ಸಲ್ಲಿಸಿದ್ದು ಮತ್ತು ನಿಡಿ- 8 ರಲ್ಲಿ ಕನ್ನಡದಲ್ಲಿ ಸಹಿ ಮಾಡಿದ್ದು, ಅದೇ ರೀತಿ ನಿಡಿ- 1 ರಲ್ಲಿ ಹೆಬ್ಬಟ್ಟಿನ ಗುರುತನ್ನು ಹಾಕಿದ್ದು ಇದಕ್ಕೆ ಏನು ಹೇಳುತ್ತೀರಿ ಎಂದರೆ ನನಗೆ ಗೊತ್ತಿಲ್ಲ. ನಿಡಿ- 1 ನ್ನು ನಿಮಗೆ ಬರೆದುಕೊಟ್ಟಿಲ್ಲವಾ ಎಂದರೆ ಆ ವೇಳೆಯಲ್ಲಿ ಅವರಿಗೆ ಆರೋಗ್ಯ ಸರಿ ಇರಲಿಲ್ಲ ಆದ ಕಾರಣ ಅವರು ಹೆಬ್ಬಟ್ಟನ್ನು ಮಾಡಿರುತ್ತಾರೆ. ನಿಡಿ- 2 ರಲ್ಲಿ ನಿಮ್ಮ ತಂದೆಯವರು ಆರೋಗ್ಯವಾಗಿ ಇದ್ದಾರೆ ಎಂದು ದಾಖಲೆ ಸಲ್ಲಿಸಿದ್ದೀರಿ ಎಂದರೆ ಸಾಕ್ಷಿಯು ನಿಡಿ- 2 ನ್ನು ಪರಿಶೀಲಸಿ ಅವರು ಯಾವ ರೋಗಕ್ಕೆ ಆಸ್ಪತ್ರೆಗೆ ಸೇರಿದ್ದರೋ ಅದಕ್ಕೆ ಸಂಬಂದಪಟ್ಟಂತೆ ನಾರ್ಮಲ್ ಎಂದು ವರದಿ ನೀಡಿರುತ್ತಾರೆ. ಹಾಗಾದರೆ ಅವರು ಏಕೆ ನಿಡಿ- 1 ರಲ್ಲಿ ಸಹಿ ಮಾಡಿರುವುದಿಲ್ಲ ಎಂದರೆ ಅವರ ಆರೋಗ್ಯ ಸರಿ ಇರಲಿಲ್ಲ. ನಿಡಿ- 1 ಮತ್ತು ನಿಡಿ- 8 ನ್ನು ನೀವು ಸೃಷ್ಟಿಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

OS No.187/2018 DW.1

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು.

OS No.187/2018 DW.1